**ಕರ್ನಾಟಕ ಸರ್ಕಾರ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.10/2021**

ಪಿ.ಡಬ್ಲ್ಯೂಃ **7**

ಸಿ.ಡಬ್ಲ್ಯೂಃ 12

| | | |
|---|---|---|
| ಹೆಸರು | ಃ | ಲೋಕೇಶಪ್ಪ |
| ತಂದೆಯ ಹೆಸರು | ಃ | ಸೋಮ್ಲನಾಯ್ಕ |
| ವಯಸ್ಸು | ಃ | 54 ವರ್ಷ |
| ಉದ್ಯೋಗ | ಃ | ಎ ಎಸ್ ಐ |
| ವಾಸಸ್ಥಳ | ಃ | ಲಕ್ಕವಳ್ಳಿ |

**ದಿನಾಂಕಃ 09-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಸ.ಸ.ಅ. ರವರಿಂದ.**

ನಾನು **2018** ರಿಂದ **2024** ರವರೆಗೆ ಲಿಂಗದಹಳ್ಳಿ **ಪೋಲೀಸ್ ಠಾಣೆಯಲ್ಲಿ** ಎ ಎಸ್ ಐ **ಆಗಿ ಕರ್ತವ್ಯ** ನಿರ್ವಹಿಸುತ್ತಿದ್ದೇನೆ.

ಈ ಸಮಯದಲ್ಲಿಚಾಸಾ-11 ರವರು ಈ ಪ್ರಕರಣದಲ್ಲಿ ಪ್ರಥಮ ವರ್ತಮಾನ ವರದಿಯನ್ನು ದಾಖಲೆ ಮಾಡಿ ನಂತರ ಭಾಗಶಃ ತನಿಖಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತಾರೆ. ನಂತರದಲ್ಲಿ ನಂತರ ಉಳಿದ ಭಾಗವಾಗಿ ನಾನು ಈ ಪ್ರಕರಣದಲ್ಲಿ ದಿನಾಂಕ 28-07-2020 ರಂದು ರೇಣುಕಾ ರವರ 164 ಸ್ಟೇಟ್ಮೆಂಟ್ ಅನ್ನು ಮಾನ್ಯ ನ್ಯಾಯಾಲಯದಿಂದ ಪಡೆದುಕೊಂಡು ನಂತರ ದಿನಾಂಕ 5.8.2020 ರಂದು ಚಾಸಾ-9 ರವರಿಂದ ಚಾಸಾ-1 ರವರ ಗಾಯದ ದೃಢೀಕರಣ ಪತ್ರವನ್ನು ಪಡೆದುಕೊಂಡು ದಿನಾಂಕ 5-08-2020 ಆರೋಪಿ ವಿರುದ್ಧ ಆರೋಪ ಸಾಬೀತಾದ ಕಾರಣ ಆರೋಪಿಯ ವಿರುದ್ಧ ದೋಷರೋಪಣಾ ತಯಾರಿಸಿ ಮಾನ್ಯ ಘನ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಗಾಯದ ಪ್ರಮಾಣ ಪತ್ರ ಆಗಿದ್ದು ಸದರಿ ದಾಖಲೆಯನ್ನು ನಿಪಿ-7 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ ಆರೋಪಿತರ ಪರ** ಶ್ರೀ ಬಿ ಟಿ ಕೆ **ವಕೀಲರಿಂದ.**

ಆರೋಪಿ ಹಾಗೂ ಚಾಸಾ-1 ರವರ ನಡುವೆ ಸಿವಿಲ್ ವ್ಯಾಜ್ಯಗಳು ಬಾಕಿ ಇವೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ನೀವು ಈ ಪ್ರಕರಣದಲ್ಲಿ ಯಾವುದೇ ತನಿಖೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಜಾವುದೇ ತಪ್ಪು ಮಾಡದೇ ಇದ್ದರೂ ಸಹ ಆರೋಪಿ ಮೇಲೆ ಸುಳ್ಳು ದೋಷರೋಪಣಾ ಪಟ್ಟಿಯನ್ನು ತಯಾರಿಸಿರುತ್ತಿರಾ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

ಸಹಿ/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ. ರವರು, ತರೀಕೆರೆ.**

ದಿನಾಂಕಃ 28-03-2020 ರಂದು ಸಂಜೆ 4-20 ಗಂಟೆಗೆ ನಾನು ಠಾಣೆಯಲ್ಲಿರುವಾಗ ಹಳೆ ಲಕ್ಕವಳ್ಳಿ ವಾಸಿ ಜಯಮ್ಮ ಎಂಬುವವರು ತಮ್ಮ ಮನೆಯ ಪಕ್ಕದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂಬ ಖಚಿತ ಮಾಹಿತಿ ಬಂದಿದ್ದು, ನಂತರ ಚಾಸಾ-6 ರವರಿಗೆ ಪಂಚರನ್ನು ಕರೆದುಕೊಂಡು ಬರುವಂತೆ ತಿಳಿಸಿರುತ್ತೇನೆ. ನಂತರ ಅವರು ಠಾಣೆಯ ಮುಂದೆ ಗ್ರಾಮ ಪಂಚಾಯಿತಿ ಕಛೇರಿ ಮುಂದೆ ಇದ್ದ ಚಾಸಾ-2 ಮತ್ತು 3 ರವರನ್ನು ಠಾಣೆಗೆ ಕರೆದುಕೊಂಡು ಬಂದಿದ್ದು, ನಂತರ ಅವರಿಗೆ ನೋಟೀಸ್ ಜಾರಿ ಮಾಡಿ ಧಾಳಿಗೆ ಸಹಕರಿಸುವಂತೆ ಕೇಳಿರುತ್ತೇನೆ.. ಠಾಣೆಯಲ್ಲಿ ಯಾವುದೇ ಮಹಿಳಾ ಪೇದೆ ಇಲ್ಲದಿರುವುದರಿಂದ ಉಪಾಧ್ಯಾಕ್ಷರು ತರೀಕೆರೆಯವರಿಗೆ ತಿಳಿಸಿ ಅನುಮತಿಯನ್ನು ಪಡೆದುಕೊಂಡು ಚಾಸಾ-5, 6, 7 ಮತ್ತು ಚಾಸಾ-2 ಮತ್ತು 3 ರವನ್ನು ಕರೆದುಕೊಂಡು ಸಂಜೆ 4-30 ಗಂಟೆಗೆ ಠಾಣೆಯಿಂದ ಹೊರಟು 4-40 ಗಂಟೆಗೆ ಹಳೆಲಕ್ಕವಳಿಯ ಜಯಮ್ಮನವ ರ ಮನೆಯ ಹತ್ತಿರ ಹೋಗಿದ್ದು, ನಂತರ ಆಕೆ ನಮ್ಮನ್ನು ನೋಡಿ ಓಡಿ ಹೋಗಿದ್ದು, ನಂತರ ಆಕೆ ಬಿಟ್ಟು ಹೋಗಿದ್ದ ನೀಲಿ ಬಣ್ಣದ ಪ್ಲಾಸ್ಟಿಕ್ ಚೀಲವನ್ನು ಪಂಚರ ಸಮಕ್ಷಮ ನೋಡಲಾಗಿ ಅದರಲ್ಲಿ 90 ಎಂ ಎಲ್ ನ ಒರಿಜಿನಲ್ ಚಾಯ್ಸ್ ಡೀಲಕ್ಸ್ ವಿಸ್ಕಿಯ 40 ಪೌಚುಗಳು ಇದ್ದು, ಓಡಿ ಹೋದ ಮಹಿಳೆಯ ಹೆಸರು ಕೇಳಲಾಗಿ ಜಯಮ್ಮ ಕೋಂ ಸುಬ್ಬಯ್ಯ ಎಂದು ತಿಳಿಸಿರುತ್ತಾರೆ. ನಂತರ ಅಲ್ಲಿಯೇ ವರದಿಯನ್ನು ತಯಾರಿಸಿ ಚಾಸಾ-5 ರವರ ಹಸ್ತ ಠಾಣೆಗೆ ಕಳುಹಿಸಿಕೊಟ್ಟಿರುತ್ತೇನೆ. ನಂತರ 5-30 ಗಂಟೆಗೆ ಚಾಸಾ-8 ರವರು ಕರೆ ಮಾಡಿ ಪ್ರಕರಣ ದಾಖಲಿಸುವ ಬಗ್ಗೆ ತಿಳಿಸಿದ್ದು, ನಂತರ ಪಂಚರ ಸಮಕ್ಷಮ 5-30 ಗಂಟೆಯಿಂದ 6-30 ವರೆಗೆ ಅಮಾನತ್ತು ಮಹಜರ್ ಕ್ರಮವನ್ನು ಜರುಗಿಸಿ ಸಂಜೆ 6-40 ಗಂಟೆ ಸಮಯದಲ್ಲಿ ಠಾಣೆಗೆ ಬಂದು ಮಾಲುಪಟ್ಟಿಯಲ್ಲಿ ಅಮಾನತ್ತುಪಡಿಸಿಕೊಂಡ ಮಾಲನ್ನು ನಮೂದಿಸಿ ಘನ ನ್ಯಾಯಾಲಯಕ್ಕೆ ನಿವೇದಿಕೊಂಡಿರುತ್ತೇನೆ. ನಂತರ ಮುಂದಿನ ತನಿಖೆಗಾಗಿ ಈ ಪ್ರಕರಣದ ಕಡತವನ್ನು ಚಾಸಾ-9 ರವರಿಗೆ ವಹಿಸಿಕೊಟ್ಟಿರುತ್ತೇನೆ.